**ಕರ್ನಾಟಕ ಸರ್ಕಾರ**

ಸಂಖ್ಯೆ:ಪಪೂಶಿಇ/ಶೈ-ಶಾ/ಮೂಸೌ/ಅ-ಬಿ/01/2013-14

ನಿರ್ದೇಶಕರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
ಸಂಪಿಗೆ ರಸ್ತೆ, 18ನೇ ಕ್ರಾಸ್,
ಮಲ್ಲೇಶ್ವರಂ, ಬೆಂಗಳೂರು-12,
ದಿನಾಂಕ: 10-10-2013.

ಉಪನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ,
.......................................
.......................................ಜಿಲ್ಲೆ.

ಮಾನ್ಯರೇ,

**ವಿಷಯ:** ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಅಗತ್ಯವಾಗಿ ಬೇಕಾಗಿರುವ ಮೂಲಭೂತ ಸೌಕರ್ಯಗಳಾದ ಪೀಠೋಪಕರಣ, ವಿಜ್ಞಾನ ಪ್ರಯೋಗಾಲಯ ಉಪಕರಣ ಮತ್ತು ಗ್ರಂಥಾಲಯ ಪುಸ್ತಕಗಳನ್ನು ಒದಗಿಸುವ ಕುರಿತು.

**ಉಲ್ಲೇಖ:** 1)ಸರ್ಕಾರದ ಆದೇಶ ಸಂಖ್ಯೆ: ಇಡಿ/06/ಯೋಜ/ಯೋಕ 2013. ದಿನಾಂಕ: 12-08-2013.

2) ಈ ನಿರ್ದೇಶನಾಲಯದಿಂದ ಒಂದನೇ ಮತ್ತು ಎರಡನೇ ಕಂತುಗಳಲ್ಲಿ ಪೀಠೋಪಕರಣ ಮತ್ತು ವಿಜ್ಞಾನ ಪ್ರಯೋಗಾಲಯ ಉಪಕರಣ ಖರೀದಿಗೆ ಬಿಡುಗಡೆ ಮಾಡಿರುವ ದಿನಾಂಕ: 04-06-2013 ಹಾಗೂ 25-09-2013ರ ಜ್ಞಾಪನಗಳು.

*****

ಸರ್ಕಾರವು ಉಲ್ಲೇಖ (1)ರ ಆದೇಶದಲ್ಲಿ ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಅಗತ್ಯತೆಯ ಆಧಾರದ ಮೇಲೆ ಡೆಸ್ಕಗಳು, ಟೇಬಲ್‌ಗಳು, ಗ್ರಂಥಾಲಯ ಪುಸ್ತಕಗಳು ಹಾಗೂ ಪ್ರಯೋಗಾಲಯದ ಉಪಕರಣಗಳನ್ನು ಖರೀದಿಸಲು 2013-14ನೇ ಸಾಲಿನಲ್ಲಿ "ಲೆಕ್ಕಶೀರ್ಷಿಕೆ 2202-02-109-0-106-125,422,423"ಅಡಿಯಲ್ಲಿ ಒಟ್ಟು ರೂ.672.00 ಲಕ್ಷಗಳನ್ನು ಸರ್ಕಾರವು ಹಂಚಿಕೆ ಮಾಡಿರುತ್ತದೆ. ಅದರಂತೆ ಉಲ್ಲೇಖ (2)ರಲ್ಲಿ ರೂ.143.75 ಲಕ್ಷಗಳನ್ನು ಮೊದಲನೇ ಕಂತಿನಲ್ಲಿ ಹಾಗೂ ರೂ.192.25 ಲಕ್ಷಗಳನ್ನು ಎರಡನೇ ಕಂತಿನಲ್ಲಿ ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಮೂಲಭೂತ ಸೌಕರ್ಯಗಳಾದ ಪೀಠೋಪಕರಣ ಹಾಗೂ ವಿಜ್ಞಾನ ಪ್ರಯೋಗಾಲಯ ಉಪಕರಣಗಳ ಖರೀದಿಗೆ ಈಗಾಗಲೇ ಅನುದಾನ ಬಿಡುಗಡೆ ಮಾಡಲಾಗಿದೆ.

ಮೇಲ್ಕಂಡಂತೆ, ಬಿಡುಗಡೆ ಮಾಡಲಾದ ಮೊದಲನೇ ಕಂತಿನ ಅನುದಾನವನ್ನು ಬಳಕೆ ಮಾಡಿಕೊಂಡಿರುವ ಬಗ್ಗೆ "ಬಳಕೆ ಪ್ರಮಾಣ ಪತ್ರ" ಈವರೆವಿಗೂ ಈ ಕಛೇರಿಗೆ ಬಂದಿರುವುದಿಲ್ಲ. ಈಗ ಎರಡನೇ ಕಂತಿನ ಅನುದಾನವನ್ನೂ ಸಹ ಬಿಡುಗಡೆ ಮಾಡಲಾಗಿದೆ. ಆದ್ದರಿಂದ ಈ ನಿರ್ದೇಶನಾಲಯದಿಂದ ಉಲ್ಲೇಖ (1)ರಂತೆ ಒಂದು ಮತ್ತು ಎರಡನೇ ಕಂತಿನ ಅನುದಾನವನ್ನು ಬಳಕೆ ಮಾಡಿಕೊಂಡಿರುವ ಬಗ್ಗೆ "ಬಳಕೆ ಪ್ರಮಾಣ ಪತ್ರ"ವನ್ನು ನಿಗದಿತ ನಮೂನೆಯಲ್ಲಿ ತಪ್ಪದೇ ದಿನಾಂಕ: 24-10-2013.ರೊಳಗಾಗಿ ಸಲ್ಲಿಸಲು ಸೂಚಿಸಿದೆ.

ಉಲ್ಲೇಖ (1)ರ ಸರ್ಕಾರಿ ಆದೇಶದನ್ವಯ ಉಳಿದ ರೂ.336.00 ಲಕ್ಷಗಳ ಅನುದಾನವು ಈ ಮಾಹೆಯ ಅಂತ್ಯದೊಳಗೆ ಬಿಡುಗಡೆಯಾಗಲಿದೆ. ಆದ್ದರಿಂದ ತಮ್ಮ ಜಿಲ್ಲಾ ವ್ಯಾಪ್ತಿಗೆ ಒಳಪಡುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಅಗತ್ಯವಿರುವ ಪೀಠೋಪಕರಣ, ವಿಜ್ಞಾನ ಪ್ರಯೋಗಾಲಯ ಉಪಕರಣ ಮತ್ತು ಗ್ರಂಥಾಲಯ ಪುಸ್ತಕಗಳ ಅವಶ್ಯಕತೆಯ ಮಾಹಿತಿಯನ್ನು ಇದರೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ ದಿನಾಂಕ: 24-10-2013. ರೊಳಗಾಗಿ ಸಲ್ಲಿಸಲು ಸೂಚಿಸಲಾಗಿದೆ.

ಇದನ್ನು ಅತೀ ಜರೂರು ಎಂದು ತಿಳಿಯುವುದು.

ಜಂಟಿ ನಿರ್ದೇಶಕರು(ಶೈಕ್ಷಣಿಕ)
ಪದವಿ ಪೂರ್ವ ಶಿಕ್ಷಣ ಇಲಾಖೆ.

______________ಜಿಲ್ಲಾ ವ್ಯಾಪ್ತಿಗೆ ಒಳಪಡುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಅಗತ್ಯವಿರುವ ಪೀಠೋಪಕರಣ, ವಿಜ್ಞಾನ ಪ್ರಯೋಗಾಲಯ ಉಪಕರಣ ಹಾಗೂ ಗ್ರಂಥಾಲಯ ಪುಸ್ತಕಗಳ ವಿವರ ಈ ಕೆಳಕಂಡಂತಿದೆ:

| ಕಾಲೇಜಿನ ಹೆಸರು ವಿಳಾಸ ಮತ್ತು ಅದರ ಸಂಕೇತ ಸಂಖ್ಯೆ | ಒಟ್ಟು ವಿದ್ಯಾರ್ಥಿಗಳ ಸಂಖ್ಯೆ ಪ್ರಥಮ ಪಿಯುಸಿ/ದ್ವಿತೀಯ ಪಿಯುಸಿ | ಪೀಠೋಪಕರಣಕ್ಕೆ ಅಗತ್ಯವಿರುವ ಅನುದಾನ ವಿವರ | ವಿಜ್ಞಾನ ಉಪಕರಣಕ್ಕೆ ಅಗತ್ಯವಿರುವ ಅನುದಾನ | ಗ್ರಂಥಾಲಯ ಪುಸ್ತಕಗಳು |
|---|---|---|---|---|
| | | | | |
| | | | | |
| | | | | |
| | | | | |
| | | | | |